# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 402/2017 ಸಿಡಬ್ಲೂ : 3 ಪಿಡಬ್ಲೂಃ 2

ಪ್ರಮಾಣವಚನ ಬೋಧಿಸಲಾಯಿತು ದಿಃ 13-03-2026

ಹೆಸರು : ಭೋಗಪ್ಪ

ತಂದೆ ಹೆಸರು : ಧೂಳಪ್ಪ

ವಯಸ್ಸು : 43 ವರ್ಷ

ಉದ್ಯೋಗ : ಅಬಕಾರಿ ಉಪನೀರೀಕ್ಷಕರು ಶಿರಗುಪ್ಪ ವಲಯ.

ವಾಸಸ್ಥಳ : ಶಿರಗುಪ್ಪ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2011 ರಿಂದ 2015 ವರೆಗೂ ಸೇಡಂ ವಲಯದಲ್ಲಿ ಅಬಕಾರಿ ರಕ್ಷಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 11-06-2014 ರಂದು ಚಾ ಸಾ 5 ರವರು ಕರೆದು ಎರಡು ಮಾದರಿ ಬಾಟಲುಗಳನ್ನು (ಎರಡು 180 ಎಂ ಎಲ್ ನ ಓರಿಜಿನಲ್ ಚಾಯ್ಸ ಬಾಟಲಿಗಳನ್ನು) ಕೊಟ್ಟು ರಾಸಾಯನಿಕ ಪರೀಕ್ಷೆ ಕುರಿತು ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ. ದಿ.17-06-2014 ರಂದು ಮರಳಿ ಕಛೇರಿಗೆ ಬಂದು ಚಾ ಸಾ 5 ರವರಿಗೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ನಂತರ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡು ಚಾ ಸಾ 5 ರವರಿಗೆ ಒಪ್ಪಿ ಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು.

ಸಾಕ್ಷಿಯು ಜಪ್ತಿ ಪಂಚನಾಮೆಯಲ್ಲಿರುವ ಚಾಸಾ 5 ರವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಶೋದನಾ ಪತ್ರವನ್ನು ನೋಡಿ ಗುರುತಿಸಿದ್ದು ಅದರಲ್ಲಿ ಚಾಸಾ 5 ರವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 4 ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಮೋಹರಿನ ನಕಲ್ನು ನೋಡಿ ಗುರುತಿಸಿದ್ದು ಅದರಲ್ಲಿ ಚಾಸಾ 5 ರವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 5 ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದರಲ್ಲಿ ಚಾಸಾ 5 ರವರ ಸಹಿಯನ್ನು ನೋಡಿ

ಗುರುತಿಸಿರುವುದರಿಂದ ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು. ಸಾಕ್ಷಿಯು 180 ಎಂ ಎಲ್ ನ ಓರಿಜಿನಲ್ ಚಾಯ್ಸ ವಿಸ್ಕಿಯ ಬಾಟಲನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದಃ

ದಿಃ 11-06-2014 ರಂದು ಚಾ ಸಾ 5 ರವರು ಕರೆದು ಎರಡು ಮಾದರಿ ಬಾಟಲುಗಳನ್ನು (ಎರಡು 180 ಎಂ ಎಲ್ ನ ಓರಿಜಿನಲ್ ಚಾಯ್ಸ ಬಾಟಲಿಗಳನ್ನು) ಕೊಟ್ಟು ರಾಸಾಯನಿಕ ಪರೀಕ್ಷೆ ಕುರಿತು ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.17-06-2014 ರಂದು ಮರಳಿ ಕಛೇರಿಗೆ ಬಂದು ಚಾ ಸಾ 5 ರವರಿಗೆ ವರದಿಯನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**(ಮರುವಿಚಾರಣೆ ಇಲ್ಲ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ**

**ಪ್ರ. ದ. ನ್ಯಾ ದಂ. ಸೇಡಂ.**